**ಓ ಎಸ್ 9/2021 ಡಿಡಬ್ಲ್ಯೂ 1**

**ಸಾಕ್ಷಿಯನ್ನು ದಿಃ 18.12.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 6 ನೇ ಪ್ರತಿವಾದಿ ಪರ ಶ್ರೀ ಎನ್ ಎಂ ಜಿ ವಕೀಲರಿಂದಃ**

ದಿನಾಂಕ 17.09.1984 ರ ಪಾಲುಪಟ್ಟಿ ಪ್ರಕಾರ ಅಜ್ಜಪಾಲಿನ ಆಸ್ತಿಗಳು ಯಾವ ಕ್ರಮಾಂಕದಲ್ಲಿ ಅವರ ಮರಣಾ ನಂತರ ವಿಲೇ ಆಗಬೇಕು ಎಂದು ಅದರಲ್ಲಿ ಬರೆದಿದೆ ಎಂದರೆ ಸರಿ. ಅದೇ ರೀತಿ ನಡೆದುಕೊಂಡು ಬಂದಿದೆ ಎಂದರೆ ಸರಿ. ಅಜ್ಜಪಾಲಿನ ಆಸ್ತಿಗಳ ಆರ್ ಟಿ ಸಿ ಗಳು ನಮ್ಮ ತಾತ ಮತ್ತು ಅಜ್ಜಿಯ ಹೆಸರಿನಲ್ಲಿಯೇ ಮುಂದುವರಿದುಕೊಂಡು ಬರುತ್ತಿವೆ ಎಂದರೆ ಸರಿ.

ದಾವಾ ಷೆಡ್ಯೂಲ್ ಐಟಂ ನಂ. 1 ಮತ್ತು 4 ರಲ್ಲಿರುವ ಸರ್ವೆ ನಂ. 72 ರಲ್ಲಿನ ಜಮೀನನ್ನು ನಮ್ಮ ಒಟ್ಟು ಕುಟುಂಬದ ಆದಾಯದಿಂದ ನಮ್ಮ ಅಜ್ಜಿಯ ಹೆಸರಿಗೆ ಕೊಂಡುಕೊಂಡಿದ್ದರು ಎಂದರೆ ಸರಿ. ದಾವಾ ಅನುಸೂಚಿ 3 ನೇ ಐಟಂ ಸ್ವತ್ತು ನಮ್ಮ ಚಿಕ್ಕಪ್ಪ ವೆಂಕಟೇಶ್ ರವರ ಹೆಸರಿಗೆ ಹೋಗಿತ್ತು. ಅದರ ಮುನಿಸಿಫಲ್ ಖಾತಾ ಈಗಲೂ ಸಹ ನಮ್ಮ ಅಜ್ಜನವರ ಹೆಸರಿನಲ್ಲಿ ಇದೆ. ಸಾಕ್ಷಿ ಮುಂದುವರಿದು ಆ ಸ್ವತ್ತನ್ನು ತನ್ನ ಚಿಕ್ಕಪ್ಪ ವೆಂಕಟೇಶ್ ರವರು ಅನಿಲ್ ಎಂಬುವವರಿಗೆ ಭೋಗ್ಯ ಮಾಡಿದ್ದಾರೆ ಎಂದು ಹೇಳುತ್ತಾರೆ. ದಾವಾ ಷೆಡ್ಯೂಲ್ ಐಟಂ ನಂ. 1 ಮತ್ತು 4 ರ ಒಂದಕ್ಕೊಂದು ಲಗತ್ತಾಗಿವೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಐಟಂ ನಂ. 1 ರಲ್ಲಿನ ಸರ್ವೆ ನಂ. 72 ರಲ್ಲಿ 0.32 ಗುಂಟೆ ಜಮೀನಿನ ಚಕ್ಕುಬಂದಿ ಪೂರ್ವಕ್ಕೆಃ ಹನುಮೇಗೌಡರ ಜಮೀನು ಮತ್ತು ಚಿಕ್ಕದೇವೇಗೌಡರ ಮಗ ಸತ್ಯನಾರಾಯಣರವರ ಜಮೀನು ಎಂದರೆ ಹನುಮೇಗೌಡರ ಜಮೀನು ಇದೆ ಆದರೆ ಚಿಕ್ಕದೇವೇಗೌಡರ ಮಗ ಸತ್ಯನಾರಾಯಣರವರ ಜಮೀನು ಇಲ್ಲ, ಪಶ್ಚಿಮಕ್ಕೆ ಮತ್ತು ಉತ್ತರಕ್ಕೆಃ ಸರ್ಕಾರಿ ಹಳ್ಳ ಎಂದರೆ ಪಶ್ಚಿಮಕ್ಕೆ ನಮ್ಮದೆ ಜಮೀನು ಇದ್ದು ಉತ್ತರಕ್ಕೆ ಸರ್ಕಾರಿ ಹಳ್ಳ, ದಕಿಣಕ್ಕೆಃ ಸರ್ಕಾರಿ ಹಳ್ಳ ಇದೆ.

ದಾವಾ ಷೆಡ್ಯೂಲ್ ಐಟಂ ನಂ. 4 ರಲ್ಲಿನ ಸರ್ವೆ ನಂ. 72 ರಲ್ಲಿ 0.06 ಗುಂಟೆ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ: ನಮ್ಮ ತಂದೆ ಸಿ ಕೆ ದೇವೇಗೌಡರಿಗೆ ಮಂಜೂರಾಗಿರುವ ಜಮೀನು, ಪಶ್ಚಿಮಕ್ಕೆ: ಹಳ್ಳ, ಉತ್ತರಕ್ಕೆ: ಹಳ್ಳ, ದಕ್ಷಿಣಕ್ಕೆ: ಮೊದಲು ಪುಟ್ಟಮ್ಮ ಹನುಮೇಗೌಡರ ಜಮೀನು ಆಗಿದ್ದು ಈಗ ದಿನೇಶರವರ ಜಮೀನು ಆಗಿದೆ.

ನಾನು ಈ ಮೇಲೆ ಹೇಳಿದ ಚಕ್ಕುಬಂದಿಗಳು ಸರಿ ಇಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಐಟಂ ನಂ.1 ರ ಉತ್ತರಕ್ಕೆ ದಾವಾ ಐಟಂ ನಂ. 4 ಇದೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಐಟಂ ನಂ.1 ಮತ್ತು 4 ರ ಸರಿಯಾದ ಚಕ್ಕುಬಂದಿಗಳು ಗೊತ್ತಾಗಿ ಬಿಡುತ್ತವೆ ಎಂಬ ಕಾರಣದಿಂದ ಆ ಜಮೀನುಗಳಿಗೆ ಸಂಬಂಧಿಸಿದ ಕ್ರಯಪತ್ರಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಐಟಂ ನಂ.4 ರ ಸ್ವತ್ತು ಭೂಸ್ವಾಧೀನಗೊಂಡ ಸಮಯದಲ್ಲಿ ನಾನು ಪಾಂಡವಪುರ ಪುರಸಭೆಯ ಸದಸ್ಯನಾಗಿದ್ದೆ ಎಂದರೆ ಸರಿ. ಹಾಗೆಯೇ ನಾನು ಸದರಿ ಪುರಸಭೆಯ ಅಧ್ಯಕ್ಷನಾಗಿಯೂ ಹಲವಾರು ವರ್ಷ ಕಾರ್ಯ ನಿರ್ಹಿಸಿದ್ದೇನೆ ಎಂದರೆ ಸರಿ. ನಾನು ಪುರಸಭೆಯ ಸದಸ್ಯನಾಗಿದ್ದ ಅವಧಿಯಲ್ಲಿ ದಾವಾ ಷೆಡ್ಯೂಲ್ ಐಟಂ ನಂ.1 ಮತ್ತು 4 ನ್ನು ಪಾಂಡವಪುರ ಒಳಚರಂಡಿ ತ್ಯಾಜ್ಯ ಘಟಕದ ಉದ್ದೇಶಕ್ಕೆ ಭೂಸ್ವಾಧೀನ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಪಾಂಡವಪುರಕ್ಕೆ ಒಳಚರಂಡಿ ತ್ಯಾಜ್ಯ ಘಟಕದ ಸ್ಥಾಪನೆಗೆ 2004 ರಲ್ಲಿ ಪಾಂಡವಪುರ ಪುರಸಭೆಯಿಂದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ನಾನು 2009 ರಿಂದ 2017 ರವರೆಗೆ ಪುರಸಭಾ ಸದಸ್ಯ ಮತ್ತು ಅಧ್ಯಕ್ಷ ಆಗಿದ್ದೆ. ಈಗ ನನಗೆ ತೋರಿಸಿದ ದಾಖಲೆಗಳು ಒಳಚರಂಡಿ ವ್ಯವಸ್ಥೆಗೆ ಸರ್ವೆ ನಂ. 72/1 ರಲ್ಲಿ ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದ ದಾಖಲೆಗಳಾಗಿವೆ. ಸಾಕ್ಷಿಯು ದಾಖಲೆಗಳನ್ನು ಒಪ್ಪಿದ್ದರಿಂದ ಅವುಗಳನ್ನು ನಿಶಾನೆ ಡಿ 26 ಮತ್ತು 27 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ದಾಖಲೆಯು ನಮ್ಮ ತಂದೆಯವರ ವಂಶವೃಕ್ಷ ಎಂದರೆ ಸರಿ. ಸಾಕ್ಷಿಯು

ದಾಖಲೆಯನ್ನು ಒಪ್ಪಿದ್ದರಿಂದ ಅದನ್ನು ನಿಶಾನೆ ಡಿ 28 ಎಂದು ಗುರುತಿಸಲಾಯಿತು. ಸಣ್ಣಮ್ಮರವರ ಜಮೀನು ಭೂಸ್ವಾಧೀನಗೊಂಡಾಗ ದಿನಾಂಕ 27.02.2018 ರಂದು ಸಿದ್ಧಪಡಿಸಿದ ವಂಶವೃಕ್ಷ ಪ್ರಮಾಣಪತ್ರ ನಿಶಾನೆ ಡಿ 28 ಆಗಿದೆ ಎಂದರೆ ಸರಿ. ಈಗ ನನಗೆ ತೋರಿಸಿದ ದಾಖಲೆಯು LAQ No.(2) 25/2011-12 ರ ದಾಖಲೆ ಆಗಿದೆ ಎಂದರೆ ಸರಿ. ಸಾಕ್ಷಿಯು ದಾಖಲೆಯನ್ನು ಒಪ್ಪಿದ್ದರಿಂದ ಅದನ್ನು ನಿಶಾನೆ ಡಿ 29 ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನಮ್ಮ ಚಿಕ್ಕಪ್ಪ ವೆಂಕಟೇಶ್ ಸಹಿ ಮಾಡಿಲ್ಲ. LAQ No.(2) 25/2011-12 ಪ್ರಕರಣದಲ್ಲಿ ನಮ್ಮ ತಂದೆ ಹಾಜರುಪಡಿಸಿರುವ ನಿ ಡಿ 28 ರ ವಂಶವೃಕ್ಷ ಪ್ರಮಾಣಪತ್ರದಲ್ಲಿ ನಮ್ಮ ತಂದೆ ಸಿ ಕೆ ದೇವೇಗೌಡ ಹಾಗೂ ನಮ್ಮ ಚಿಕ್ಕಪ್ಪ ವೆಂಕಟೇಶ್ ಮತ್ತು ಸಿ ಕೆ ನಾಗರಾಜೇಗೌಡರೂ ಅಲ್ಲದೆ ಸುಧಾ ಡಿ, ಡಿ ಶ್ರೀನಿವಾಸ, ಡಾಕ್ಟರ್ ಡಿ ಚಂದ್ರಕಲಾ ಮತ್ತು ಡಿ ಚಂದ್ರಶೇಖರ್ ರವರುಗಳ ಹೆಸರುಗಳು ಸಹ ಇದೆ ಎಂದರೆ ಸರಿ. ನಮ್ಮ ತಂದೆಯ ಮರಣಾ ನಂತರ LAQ No.(2) 25/2011-12 ಪ್ರಕರಣದಲ್ಲಿ ನಮ್ಮ ಅಕ್ಕತಂಗಿಯರನ್ನು ಕೈ ಬಿಟ್ಟು ನಾನು ಮತ್ತು ನನ್ನ ತಮ್ಮ ಮಾತ್ರ ಅರ್ಜಿ ಹಾಕಿಕೊಂಡಿದ್ದೇವೆ ಎಂದರೆ ಸರಿ. ಸಾಕ್ಷಿ ಮುಂದುವರಿದು ತನ್ನ ಅಕ್ಕ ತಂಗಿಯರು ನೋಂದಾಯಿತ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿರುವ ಕಾರಣ ಅವರನ್ನು ಆ LAQ No.(2) 25/2011-12 ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಲಿಲ್ಲ ಎಂದು ಹೇಳುತ್ತಾರೆ.

ಸರ್ವೆ ನಂ. 72 ರಲ್ಲಿ ನಮ್ಮ ಕುಟುಂಬಕ್ಕೆ ಸೇರಿದ 0.15 ಗುಂಟೆ, 0.32 ಗುಂಟೆ, 0.24 ಗುಂಟೆ, 0.06 ಗುಂಟೆ ಮತ್ತು 0.20 ಗುಂಟೆ ಇದೆ. ಸಾಕ್ಷಿ ಮುಂದುವರಿದು ಸದರಿ ಸರ್ವೆ ನಂಬರಿನಲ್ಲಿ ಬೇರೆಯವರ ಆಸ್ತಿಗಳು ಇದ್ದು ಆ ಸರ್ವೆ ನಂಬರಿನ ಒಟ್ಟು ವಿಸ್ತೀರ್ಣ ತನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂಬರ್ 72 ರಲ್ಲಿ 0.15 ಗುಂಟೆ ಜಮೀನು ಒಟ್ಟು ಕುಟುಂಬದ ನಮ್ಮ ತಂದೆ ಹೆಸರಿನಲ್ಲಿ ಖರೀದಿಸಲ್ಪಟ್ಟು ನಂತರ ನಮ್ಮ ತಾಯಿಯ ಹೆಸರಿಗೆ ಪೌತಿ ಖಾತೆ ಆಗಿದೆ. ಈ ಮೇಲೆ

ಹೇಳಿದ ಎಲ್ಲಾ ಜಮೀನುಗಳು ಸರ್ವೆ ನಂ. 72/1 ಎಂದರೆ ಸರಿ. ಈ ಯಾವುದೇ ಸ್ವತ್ತುಗಳಿಗೆ ಸಂಬಂಧಿಸಿದಂತೆ ಪೋಡಿ ದುರಸ್ತಿ ಆಗಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ತನ್ನ ತಂದೆ ಹೆಸರಿನಲ್ಲಿ 1995 ರಲ್ಲಿ ಮಂಜೂರಾಗಿದ್ದ ಸರ್ವೆ ನಂ. 72/1 ರಲ್ಲಿನ ಜಮೀನನ್ನು ಹೊರತುಪಡಿಸಿ ಬೇರೆ ಯಾವ ಜಮೀನು ಸಹ ಪೋಡಿ ದುರಸ್ತು ಆಗಿಲ್ಲ ಎಂದು ಹೇಳುತ್ತಾರೆ.

ನಮ್ಮ ತಂದೆಗೆ ಮಂಜೂರಾತಿಯಾಗಿದೆ ಎಂದು ನಾನು ಹೇಳುತ್ತಿರುವ ಸರ್ವೆ ನಂ. 72/1 ರಲ್ಲಿನ 0.24 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಕೊಂಡಯ್ಯ ಎಂಬುವವರು ನಮ್ಮ ತಾತ, ನಮ್ಮ ಅಜ್ಜಿ ಹಾಗೂ ತಂದೆಯ ವಿರುದ್ದ ಅಸಲು ದಾವಾ ಸಂಖ್ಯೆ 47/1979 ನ್ನು ಹಕ್ಕು ಮಾಲೀಕತ್ವ ಹಾಗೂ ಶಾಶ್ವತ ನಿರ್ಬಂಧಕಾಜ್ಞೆ ಪರಿಹಾರ ಕೋರಿ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಆ ದಾವೆಯು 13.12.1987 ರಂದು ಡಿಕ್ರಿಯಾಯಿತು ಎಂದರೆ ನನಗೆ ಗೊತ್ತಿಲ್ಲ. ಆ ಡಿಕ್ರಿಯ ವಿರುದ್ಧ ನಮ್ಮ ಅಜ್ಜಿ ನಮ್ಮ ತಂದೆ ಹಾಗೂ ನಮ್ಮ ಚಿಕ್ಕಪ್ಪಂದಿರು ಆರ್ ಎ 36/87 ನ್ನು ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಅಪೀಲು ಸಹ ದಿನಾಂಕ 22.07.1989 ರಂದು ವಜಾಗೊಂಡಿತು ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಗೆ ಆ ಜಮೀನು ಮಂಜೂರು ಮಾಡಿರುವುದು ತಪ್ಪು ಎಂದು ಹೇಳಿ ಕೊಂಡಯ್ಯ ಮತ್ತು ಕುಟುಂಬದವರು ನಮ್ಮ ತಂದೆ ವಿರುದ್ಧ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಆರ್ ಎ 46/96-97 ನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆಗೆ ನಿಶಾನೆ ಡಿ 19 ರ ಪ್ರಕಾರ ನೀಡಿರುವ ಗ್ರ್ಯಾಂಟ್ ಸರ್ಟಿಪಿಕೇಟ್‌ನ್ನು ಉಪ ವಿಭಾಗಾಧಿಕಾರಿಗಳ ನ್ಯಾಯಾಲಯವು ದಿನಾಂಕ 26.05.1997 ರ ಆದೇಶದ ರೀತ್ಯಾ ಆರ್ ಎ 46/96-97 ರಲ್ಲಿ ರದ್ದು ಮಾಡಿದೆ ಎಂದರೆ ನನಗೆ ಗೊತ್ತಿಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಗಿದೆ.**

(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಸಾ ಓ ಹೇ ಸ ಒ

(ಬಾಬು ಎನ್)

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,

ಪಾಂಡವಪುರ